ಬರುವ ತನಕ ಕಳವಳದಿಂದ ಬೆಂದು ಹೋಗಿದ್ದರು. ಇದ್ದ ಒಬ್ಬಳ ಮಗಳ ಬದುಕಿನ ಪ್ರಶ್ನೆಯಾಗಿತ್ತು. ಅವರು ಕಂಡಂತೆ, ಕೇಳಿದಂತೆ ಎಂದೂ ಅಳಿಯ–ಮಗಳ ನಡುವೆ ಯಾವ ಮನಸ್ತಾಪ ಸುಳಿದಿದ್ದು ಅವರ ಗಮನಕ್ಕೆ ಬಂದಿರಲಿಲ್ಲ. ನಿವೇದಿತಾಳ ಬಾಯಿಂದ ಅಳಿಯನ ಬಗ್ಗೆ ಮುಕ್ತಪ್ರಶಂಸೆಯನ್ನು ಕೇಳಿದ್ದರೇ ಹೊರತು ತಪ್ಪು ಮಾತುಗಳಲ್ಲ, ನಿಂದನೆ, ಅವಹೇಳನ ಅಥವಾ ಆಕ್ಷೇಪಣೆಗಳಲ್ಲ. ಮಗಳು ಗಂಡನ ಮನೆಯಲ್ಲಿ ಸುಖವಾಗಿದ್ದಾಳೆ ಎನ್ನುವ ನೆಮ್ಮದಿಗಿಂತ ಮುಖ್ಯವಾಗಿ ಹೆಣ್ಣು ಹೆತ್ತವರಿಗೆ ಬೇರೇನೂ ಬೇಕಾಗಿಲ್ಲ. ಅದೇ ನೆಮ್ಮದಿಯ ಭಾವದಲ್ಲಿ ಮೈಮರೆತಂತಿದ್ದ ಕೇಶವ–ವೀಣಾರಿಗೆ ಅಳಿಯ ಪ್ರದೀಪನ ಕರೆಯಿಂದ ತುಸು ಧೃತಿಗೆಟ್ಟವರಂತಾಗಿದ್ದರು. ಆದರೆ ಮನೆ ಬಾಗಿಲು ತೆರೆದು ಸ್ವಾಗತಿಸಿದ ನಿವೇದಿತಾಳ ಮುಖದಲ್ಲಿ ನಿರ್ಮಲ ನಗು..ಸಂಭ್ರಮ..!

'ಏನೂ ಇಲ್ಲ ನಿವೀ... ನಿನ್ನನ್ನ ಮತ್ತು ಮೊಮ್ಮಗಳನ್ನ ನೋಡಿ ಹೋಗೋಣಾಂತ ಬಂದ್ವಿ... ಎಲ್ಲಿ ನಮ್ಮ ಪುಟ್ಟಿ..?' ಪ್ರಶ್ನೆ ಮೊಮ್ಮಗಳನ್ನುದ್ದೇಶಿಸಿ ಕೇಳಿದ್ದಾದರೂ ಅವರ ಕಂಗಳು ಅಳಿಯನಿಗಾಗಿ ಅರಸಿದವು.

'ಪುಟ್ಟಿ ಇವ್ರ ಜೊತೆ ಆಫೀಸು ರೂಮಿನಲ್ಲಿದ್ದಾಳೆ. ಇವ್ರು ಮನೇಲಿದ್ದರೆ ಅಪ್ಪನ್ನ ಬಿಟ್ಟು ಕೆಳಗಿಳಿಯೋದೇ ಇಲ್ಲ. ನಾನು ಕೂಡಾ ಬೇಡಾ ಅವ್ಳಿಗೆ...' ಮಾತುಗಳು ದೂರುವಂತಿದ್ದರೂ ಅವಳಿಗೆ ಅದು ಪ್ರಿಯವೇ ಆಗಿತ್ತೆಂದು ಅವಳ ಮುಖದಲ್ಲಿ ಮೂಡಿದ ತಿಳಿನಗೆ ಸಾರುತ್ತಿತ್ತು. ಮಗಳು, ಪ್ರದೀಪ ಕಚೇರಿಯ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದ ಕೋಣೆಗೆ ಆತನನ್ನು ಕರೆಯಲೆಂದು ಅಲ್ಲಿಂದ ಸರಿದಾಗ, ವೀಣಾ ಪತಿಯ ಕಿವಿಯ ಬಳಿ ಪಿಸುಗುಟ್ಟಿದರು, 'ನೀವು ಹೇಳಿದ್ದು ನೋಡಿದ್ರೆ ನಾನು ಏನೋ ಅಂತ ಅಂದುಕೊಂಡೆ. ಇನ್ನೂ ನನ್ನ ಹೃದಯ ಬಡಿತ ಹೊಡ್ಕೊಳ್ಳೋದು ನನ್ಗೇ ಕೇಳಿಸ್ತಾ ಇದೆ. ಅಷ್ಟೊಂದು ಭಯವಾಗಿತ್ತು. ಎಲ್ಲಾ ಸರಿಯಾಗಿದೆ ಪುಣ್ಯಕ್ಕೆ...' ಮಗಳ ಮುಖದ ಮೇಲಿದ್ದ ಸಂತೃಪ್ತಿಯ ನಗೆ ಕಂಡು ನಿರಾಳರಾದ ತಮಗೆ ತಾವೇ ಸಮಾಧಾನ ಹೊಂದಿಕೊಂಡವರಂತೆ ನುಡಿದರು. ಕೇಶವರ ಮನಸ್ಸೂ ಪತ್ನಿಯ ಮಾತುಗಳನ್ನು ಅನುಮೋದಿಸಿತು.

'ತಮಗೆ ಹಾಗನ್ನಿಸಿರಬೇಕು. ಪುಣ್ಯಕ್ಕೆ ಇಲ್ಲಿ ಎಲ್ಲವೂ ಸಹಜವಾಗಿದೆ. ಅಪಸ್ವರದ ಯಾವ ಛಾಯೆಯೂ ಇಲ್ಲ...' ಎಂದುಕೊಳ್ಳುವಾಗಲೇ ಪ್ರದೀಪ ತನ್ನ ಕಚೇರಿಯ ಬಾಗಿಲು ತೆರೆದು ಹೊರ ಬಂದಿದ್ದ. ಅವನ ಕಂಕುಳಲ್ಲಿದ್ದ ಮಗು ನಿಧಿ ಅಜ್ಜಿ ತಾತನ ಗುರುತು ಹಿಡಿದು ಮೊಗವರಳಿಸಿ ನಕ್ಕಿತು. ತನ್ನನ್ನು ಎತ್ತಿಕೊಳ್ಳುವಂತೆ ಬಾಗಿದ ಮೊಮ್ಮಗಳನ್ನು ಧಾವಿಸಿ ಹೋಗಿ ಕೇಶವರು ಎತ್ತಿಕೊಂಡವರಿಗೆ ಪ್ರದೀಪ, 'ಬನ್ನಿ ಮಾವ... ನಿಮ್ಹತ್ರ ತುರ್ತಾಗಿ ಮಾತನಾಡಬೇಕು. ಅತ್ತೆ... ನೀವೂ ಬನ್ನಿ ಆಫೀಸ್ ರೂಮಿಗೆ...'.

ತಮ್ಮ ಹಿಂದೆ ಬರಲೆತ್ನಿಸಿದ ಪತ್ನಿಯನ್ನು ಪ್ರದೀಪ ತಡೆದ, 'ನಿವೇದಿತಾ... ನಾನು ಸ್ವಲ್ಪ ಪರ್ಸನಲ್ಲಾಗಿ ನಿನ್ನ ಪೇರೆಂಟ್ಸ್ ಹತ್ರ ಮಾತನಾಡ್ಬೇಕು. ನೀನು ಸ್ವಲ್ಪ ಹೊರಗಿರು... ಪ್ಲೀಸ್..'

ಅವನ ಗಂಭೀರವಾದ ಮುಖ, ಮಾತು, ನಡೆ ತುಸು ವಿಚಿತ್ರವೆನಿಸಿ, ನಿವೇದಿತಾಳ ಮುಖಭಾವ ಕುಂದಿತು.

'ನನ್ಗೆ ಗೊತ್ತಿಲ್ಲದಂಥ ಮಾತು ಏನು ಪ್ರದೀಪ್?' ನಿವೇದಿತಾಳ ಹುಬ್ಬುಗಳು ಒಂದುಗೂಡಿದರೂ ಅಪಾರ್ಥವೆಣಿಸದೇ ಸಹಜ ನಗೆ ನಗುತ್ತಾ, 'ನನ್ನ ಬೆನ್ನ ಹಿಂದೆ ಏನು ಪಿತೂರಿ ನಡೆಸ್ತಾ ಇದ್ದೀರಾ?' ಎಂದಳು.

ಅವಳ ಮಾತು ತನಗೆ ಆಲಿಸದೆಂಬಂತೆ ಪ್ರದೀಪ ಅವಳಿಗೆ ಬೆನ್ನು ಮಾಡಿ ನಡೆದ. 'ನಿಧೀನ್ನ ನನ್ಗೆ ಕೊಡಿ... ಅವಳು ಅಲ್ಲಿದ್ರೆ ನಿಮ್ಗೆ ಮಾತನಾಡಲು ಬಿಡೋದಿಲ್ಲಾ...' ಕೇಶವರ ಮಡಿಲಲ್ಲಿದ್ದ ಮಗಳನ್ನು ಪಡೆಯಲು ಹೋದ ಪತ್ನಿಯನ್ನು ಪ್ರದೀಪ ಗಂಭೀರ ದನಿಯಲ್ಲಿ ತಡೆದ, 'ನಿಧಿ ನಮ್ಜೊತೇನೇ ಇರಲಿ... ನೀನು ಹೋಗು ನಿವೇದಿತಾ...'

ಅಳಿಯನ ನಡವಳಿಕೆ ತುಸು ವಿಚಿತ್ರವಾಗಿ ಕಂಡು ಕೇಶವರ ಮನಸ್ಸು ಕಸಿವಿಸಿಗೊಂಡಿತು. ಪತ್ನಿಯತ್ತ ಕಣ್ಣು ಹಾಯಿಸಿದವರಿಗೆ ಅಲ್ಲೂ ಅದೇ ಭಾವ ಗೋಚರಿಸಿತು. ನಿವೇದಿತಾಳ ಮುಖ ಸಪ್ಪಗಾಯಿತು, 'ನೀವೆಲ್ಲರೂ ಒಂದು... ನಾನೊಬ್ಳೇ ಬೇರೆ ಇರ್ಬೇಕಾ... ಇದು ಸರೀನಾ? ಏನು ವಿಚಾರ ಅಂತ ನನ್ಹತ್ರ ಹೇಳ್ಬಾರ್ದಾ?' ಅವಳ ದನಿಯಲ್ಲಿ ಆಕ್ಷೇಪಣೆ ಮೂಡಿದರೆ, ಕಂಗಳಲ್ಲಿ ಸಣ್ಣಗೆ ನೀರಾಡಿತು.

ಮಗಳ ಬಳಿ ಮಾತನಾಡುವಾಗ ಅಳಿಯನ ಮುಖ ದನಿ ಬಿಗಿದುಕೊಂಡಿದ್ದು ಕೇಶವರ ಗಮನಕ್ಕೆ ಬಾರದೇ ಇರಲಿಲ್ಲ. ನಿಂತಲ್ಲೇ ತಳಮಳಿಸಿ ಹೋದರು. ಅಳಿಯನ ಬಿಗು ನಡವಳಿಕೆ, ಈಗ ತಮ್ಮೊಡನೆ ಏಕಾಂತದಲ್ಲಿ ಮಾತನಾಡುವ ಅವನ ಇಚ್ಛೆಯ ಹಿಂದೆ ಏನು ಸಂಗತಿಯೋ ಅರಿಯದೇ ಆತಂಕಪಟ್ಟರು. ತನ್ನ ಕೋಣೆಗೆ ಕರೆಸಿಕೊಂಡು ಬಾಗಿಲೆಳೆದುಕೊಂಡಾಗ ನಿವೇದಿತಳೊಬ್ಬಳೇ ಹೊರಗುಳಿದಳು. ಮಗಳನ್ನು ಅಲಕ್ಷಿಸುತ್ತಿರುವ ಅಳಿಯನ ವರ್ತನೆ ಸಹಿಸದಿದ್ದರೂ ಅಳಿಯನ ಎದುರು ತೋರಿಸಿಕೊಡಲಾಗಲಿಲ್ಲ.

'ಕೂತ್ಕೊಳ್ಳಿ ಮಾವ. ಅತ್ತೆ... ನೀವೂ ಕೂತ್ಕೊಳ್ಳಿ...' ಎಂದು ನಿಧಿಯನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡವನು ಗಂಭೀರ ಮುಖ ಮಾಡಿ ಕೆಲಕ್ಷಣ ಮೌನಕ್ಕೆ ಮೊರೆ ಹೋದ. ನಂತರ ಗಂಟಲು ಸರಿಪಡಿಸಿಕೊಂಡವನು, 'ನಾನು ಹೇಳ್ತಿರೋ ವಿಷ್ಯ ನಿಮ್ಗೆ ನೋವು ಕೊಡಬಹುದು. ನಂಬಲಾರದೇ ಇರಬಹುದು. ಆದ್ರೆ... ನಾನು ಬಹಳ ಯೋಚಿಸಿ ತೆಗೆದುಕೊಂಡ ನಿರ್ಧಾರ ಇದು...' ಅವನು ಏನು ಮುಂದೆ ಹೇಳಬಹುದೆಂಬ ಸಣ್ಣ ಸುಳಿವೂ ಇರದೇ ಪ್ರದೀಪನ ಮುಖ ಪೆಚ್ಚಾಗಿ ನೋಡುತ್ತ ಕುಳಿತವರಿಗೆ ಅವನು ಮುಂದೆ ಆಡಿದ ಮಾತುಗಳನ್ನಾಲಿಸಿದಾಗ ಕಾಲಡಿಯ ಭೂಮಿಯೇ ಕುಸಿದಂಥ ಅನುಭವ.

'ಇನ್ನು ಮುಂದೆ ನಿವೇದಿತಾ ಇಲ್ಲಿರೋದು ಬೇಡ. ನೀವು ನಿಮ್ಜೊತೆ ಅವಳನ್ನು ಕರ್ಕೊಂಡು ಹೋಗಬಹುದು. ಅವಳ ಸಾಮಾನುಗಳೆಲ್ಲಾ ನೀವೇ ಪ್ಯಾಕ್ ಮಾಡಿ ತಗೊಂಡು ಹೋಗಿ. ಅದಿಕ್ಕೇ ಅತ್ತೇನ್ನ ಬರಲು ತಿಳಿಸಿದ್ದು...'

ಅವನು ಏನು ಹೇಳುತ್ತಿದ್ದಾನೆ... ತಾವು ಆಲಿಸಿಕೊಂಡ ಮಾತುಗಳು ನಿಜವೋ ಸುಳ್ಳೋ... ಏನೂ ಪ್ರತಿಕ್ರಿಯಿಸಲಾರದಂತೆ ಚಾಲನೆ ಇಲ್ಲದವರಂತೆ ಕುಳಿತವರಿಗೆ ಪ್ರದೀಪ ನುಡಿದ, 'ಅವ್ಳಿಗೆ ನಾನು ಈ ಸಂಗತಿ ತಿಳಿಸಿಲ್ಲ... ನೀವೇ ಹೇಳ್ಬಿಡಿ. ಕರ್ಕೊಂಡು ಹೋಗಿ...' ಅವನ ಧ್ವನಿಯಲ್ಲಿ ಸ್ಪಷ್ಟತೆ ಇತ್ತು. ಹೇಳಿಕೆಯಲ್ಲಿ ಖಚಿತತೆ ಇತ್ತು. ಅವನಾಗಲೇ ಎಲ್ಲವನ್ನೂ ನಿರ್ಧರಿಸಿ ಬಿಟ್ಟಿದ್ದ. ವೀಣಾ ಸೆರಗು ತುಟಿಗಾನಿಸಿಕೊಂಡು ಅಳಲು ಶುರುವಿಟ್ಟುಕೊಂಡರು. ಕೇಶವರು ಅಧೀರರಾಗಿ ಪ್ರದೀಪನ ಮುಂದೆ ಕೈ ಮುಗಿದು, 'ಅಳಿಯಂದಿರೇ... ನಿವೇದಿತಾನ್ನ ನಮ್ಜೊತೆ ಕರ್ಕೊಂಡು ಹೋಗ್ಬೇಕಾ? ಯಾಕೆ ಹೀಗೆ ಹೇಳ್ತಿದ್ದೀರಾ? ಏನಾಯ್ತು? ಯಾಕೆ ಮನಸ್ಸು ಕಹಿ ಮಾಡಿಕೊಂಡಿದ್ದೀರಾ? ನನ್ನ ಮಗ್ಳು ಏನು ತಪ್ಪು ಮಾಡಿದ್ದಾಳೆ?' ಎಂದರು.

ಪ್ರದೀಪ ಹೇಗೆ ಹೇಳುವುದೆಂದು ತೋಚದವನಂತೆ ಅಸಹಾಯಕತೆ ಪ್ರದರ್ಶಿಸಿದ. 'ಹೇಗೆ ಹೇಳಲಿ..? ಹೇಳಿದರೆ ನೀವು ನಂಬುವುದಿಲ್ಲ...'

ಕೇಶವರು ಕೈ ಮುಗಿದರು, 'ಅದೇನೂಂತ ಹೇಳಿ ದಯವಿಟ್ಟು... ನನ್ನ ಮಗ್ಳಿಗೆ ಅನ್ಯಾಯ ಮಾಡಬೇಡಿ...'

'ನಿವೇದಿತಾ ತನ್ನ ಮಗಳು ನಿಧಿಯನ್ನು ಮುಗಿಸುವ ಪ್ರಯತ್ನದಲ್ಲಿದ್ದಳು. ನಾನು ಬರೋದು ಒಂದು ನಿಮಿಷ ತಡವಾಗಿದ್ದರೆ... ಈಗ ಈ ಮಗು ನಮ್ಮ ಕಣ್ಮುಂದೆ ಇರ್ತಾ ಇರಲಿಲ್ಲ... ಗೊತ್ತಾ..? ಅಂಥವಳನ್ನು ನಾನು ಮನೇಲಿ ಇಟ್ಕೋಬೇಕಾ? ಅವ್ಳು ಒಬ್ಬ ತಾಯಿಯಾ?'

ಪ್ರದೀಪ ಹೇಳಿದ ಮಾತುಗಳನ್ನು ಆಲಿಸಿ ಕೇಶವ ದಂಪತಿ ದಿಗ್ಮೂಢರಾದರು. 'ಏನು ಹೇಳ್ತಿದ್ದೀರಾ ಅಳಿಯಂದಿರೇ? ನಿವೀ... ತಾನು ಹೆತ್ತ ಮಗುವನ್ನು ಕೊಲ್ಲುವ ಪ್ರಯತ್ನ ಮಾಡುವಳೇ? ನಿಮ್ಗೇನಾಗಿದೆ..? ಅದು ಸಾಧ್ಯವೇ ಇಲ್ಲದ ಮಾತು. ತಾನು ಒಂಬತ್ತು ತಿಂಗಳು ಹೊತ್ತು ಹೆತ್ತ ಮಗುವನ್ನು ನಿವೇದಿತಾ... ಛೆ... ಛೇ... ಕಲ್ಪನೆಯಲ್ಲೂ ಊಹಿಸಲಾಗದ ಸಂಗತಿ...' ಕೇಶವರು ತಲೆ ಕೊಡವಿದರು. ಇಷ್ಟು ಹೊತ್ತು ಮೌನವಿದ್ದ ವೀಣಾ ಅಸಮಾಧಾನದಿಂದ, 'ಏನು ಮಾತೂಂತ ಆಡ್ತೀರಾ ಅಳಿಯಂದಿರೇ... ವೃಥಾ ಇಂಥ ಅಪವಾದ ನಮ್ಮ ಮಗಳ ಮೇಲೆ ಹಾಕಬಹುದಾ ನೀವು? ಅವಳು ತಾನು ಹೆತ್ತ ಮಗಳನ್ನು ಹೇಗೆ ತಾನೇ ಕೊಲ್ತಾಳೆ? ಅವಳು ಮಾತ್ರವಲ್ಲ... ಜಗತ್ತಿನಲ್ಲಿ ಯಾವ ತಾಯಿಯೂ ಅಷ್ಟು ಕಟುಕಳಿರಲಾರಳು...'

ಪ್ರದೀಪ ಗಂಭೀರ ದನಿಯಲ್ಲಿ ನುಡಿದ, 'ಇಂಥ ಗಂಭೀರ ಆರೋಪ ನಾನು ಮಾಡಬೇಕಾದರೆ... ನೀವೇ ಊಹಿಸಿ... ನನಗೆ ಹೇಗಾಗಿರಬೇಡ? ನಾನೇ ಕಣ್ಣಾರೆ ನೋಡಿದೆ... ನಿಧಿಯ ಮೂಗನ್ನು ಅವಳು ಬಲವಾಗಿ ಒತ್ತಿ ಹಿಡಿದಿದ್ದಳು. ನಿಧಿ ಉಸಿರಾಟಕ್ಕಾಗಿ ಪರಿತಪಿಸಿ ಕೈಕಾಲು ಬಡಿಯುತ್ತಿತ್ತು... ನಿವೇದಿತಾಳ ಮುಖ ಸಿಟ್ಟಿನಿಂದ ಅದುರುತ್ತಿತ್ತು... ಮೈಮೇಲೆ ಪ್ರಜ್ಞೆ ಇಲ್ಲದವಳಂತೆ ಕುಳಿತಿದ್ದಳು. ನಿಧಿ ಅರಚಿದರೂ ಅದರ ಪರಿವೆ ಇಲ್ಲದವಳಂತೆ ಅವಳು ಕಟುಕಳಾಗಿದ್ದಳು. ನಾನು ಅವಳತ್ತ ಧಾವಿಸಿ ಅವಳ ಕೈ ಹಿಡಿದೆಳೆಯದಿದ್ದರೆ